**ಓ ಎಸ್ ನಂಃ 64/2022**
**ಪಿ ಡಬ್ಲ್ಯೂ ಃ 1**

**ದಿಃ 06.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಂ ವಿ ಎಸ್ ವಕೀಲರಿಂದಃ-**

ನಾನು ಈ ದಾವೆಯನ್ನು 37 ಗುಂಟೆ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂ. 60/5. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಯನ್ನು ನೋಡಿದ್ದೀರ ಎಂದರೆ ಸಾಕ್ಷಿಯು ನಾನು ಇತ್ತೀಚಿನ ದಿನಗಳಲ್ಲಿ ನೋಡಿರುತ್ತೇನೆ. ಸದರಿ ಪಹಣಿಯನ್ನು ನಾನು 3 ವರ್ಷಗಳಿಂದ ನೋಡಿರುತ್ತೇನೆ. ಸರ್ವೆ ನಂ. 60/5 ರ ಪಹಣಿ ಪತ್ರಿಕೆಯಲ್ಲಿ 1 ಎಕರೆ 14 ಗುಂಟೆ ಜಮೀನು ಮತ್ತು 7 ಗುಂಟೆ ಖರಾಬು ಜಮೀನು ಇದೆ. ದಾವಾ ಸ್ವತ್ತು ಮೂಲತಃ ಜೋಡಿ ಇನಾಮ್ತಿ ಜಮೀನು, ಶೇಷಗಿರಿ ರಾವ್ ರವರು ದಾವಾ ಸ್ವತ್ತಿನ ಜೋಡಿದಾರರು ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಗುಡ್ಡಯ್ಯನ ಮಗ ಗುಡ್ಡತಿಮ್ಮಯ್ಯನವರು ಶೇಷಗಿರಿ ರಾವ್ ರವರ ಜಮೀನುಗಳಲ್ಲಿ ಗೇಣಿದಾರರಾಗಿ ಗೇಣಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಗುಡ್ಡತಿಮ್ಮಯ್ಯನವರು ಸ್ಪೆಷಲ್ ತಹಶೀಲ್ದಾರ್ ಇನಾಮ್ಸ್ ಅಬಾಲಿಷನ್ ರವರ ಮುಂದೆ ಕೇಸ್ ನಂ. 93/1959-60 ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಹೂಜಗಲ್ಲು ಗ್ರಾಮದ ಸರ್ವೆ ನಂ. 60/5 ರಲ್ಲಿ 28 ಗುಂಟೆ ಜಮೀನನ್ನು ಗುಡ್ಡತಿಮ್ಮಯ್ಯನವರ ಹೆಸರಿಗೆ ಮಂಜೂರಾತಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಗುಡ್ಡತಿಮ್ಮಯ್ಯನವರು ಪ್ರತಿವಾದಿ ತಂದೆ ಮಾರೇಗೌಡರಿಗೆ ದಿಃ 07.09.1999 ರಂದು ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 28 ಗುಂಟೆ ಜಮೀನಿನಲ್ಲಿ 1 ಗುಂಟೆ ಜಮೀನನ್ನು ಗುಡ್ಡತಿಮ್ಮಯ್ಯನವರು ಉಳಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಾರೇಗೌಡರು ಕ್ರಯಕ್ಕೆ ಪಡೆದಾಗಿನಿಂದ ಸದರಿ ಜಮೀನಿನಲ್ಲಿ ಅವರೆ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಕ್ರಯ ಪತ್ರದ ಆಧಾರದ ಮೇರೆಗೆ ಮಾರೇಗೌಡ ರವರ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿಯು ಆಗಿರಬಹುದು ಆದರೆ ನಾನು ನೋಡಿಕೊಂಡಿರಲಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ಸದರಿ 27 ಗುಂಟೆ ಜಮೀನಿನ ಖಾತೆಯು ಮಾರೇಗೌಡ ರವರ ಹೆಸರಿನಲ್ಲಿದೆ ಎಂದರೆ ಸರಿ.

ರಾಜಣ್ಣನವರು ನನ್ನ ಅಣ್ಣ. ನಿಪಿ 5 ಮತ್ತು 6 ಪಹಣಿ ಪತ್ರಿಕೆಗಳಲ್ಲಿ 2 ನೇ ವಾದಿಯಾದ ರಾಜಣ್ಣರವರ ಹೆಸರಿನಲ್ಲಿ 26 ಗುಂಟೆ ಜಮೀನು ಇದೆ ಎಂದರೆ ಸರಿ. ನಿಪಿ 1 ರ ವಂಶವೃಕ್ಷವನ್ನು ತಪ್ಪಾಗಿ ಹೇಳಿ ಬರೆಸಿದ್ದೀರಿ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಹೆಸರಿನಲ್ಲಿರುವ ಖಾತೆಯನ್ನು

**ಓ ಎಸ್ ನಂಃ 64/2022**
**ಪಿ ಡಬ್ಲ್ಯೂ ಃ 1**

ಪ್ರಶ್ನೆ ಮಾಡಿ ನಾನು ತಹಶೀಲ್ದಾರ್ ರವರ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಪ್ರಕರಣ ಇತ್ಯರ್ಥವಾಗಿದೆ. 26 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ನಮ್ಮ ಪರವಾಗಿ ತಹಶೀಲ್ದಾರ್ ರವರು ಆದೇಶ ಮಾಡಿರುತ್ತಾರೆ. ಸದರಿ ಆದೇಶದ ವಿರುದ್ಧ ತಾವೇನಾದರೂ ಮೇಲ್ಮನವಿ ಸಲ್ಲಿಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತನ್ನು ತಾವು ಯಾರ ಕಡೆಯಿಂದ ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಅವರ ಅಣ್ಣನಾದ ಗುಡ್ಡಯ್ಯ ನವರ ಕಡೆಯಿಂದ 15 ಗುಂಟೆ ಜಮೀನನ್ನು ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ. ನಮ್ಮ ತಂದೆಯವರು ಖರೀದಿ ಮಾಡಿರುವ ಜಮೀನಿನ ಸರ್ವೆ ನಂ. 60/5. ನಮ್ಮ ತಂದೆಯವರು ಪುನಃ ಸರ್ವೆ ನಂ. 60 ರಲ್ಲಿ 15 ಗುಂಟೆ ಜಮೀನನ್ನು ಗಂಗಮ್ಮ ನವರಿಂದ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದಾರೆ. ನಮ್ಮ ತಂದೆಯವರು ಒಟ್ಟು 30 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. ನಾನು ಈ ದಾವೆಯಲ್ಲಿ 37 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿರುತ್ತೇನೆ. ತಹಶೀಲ್ದಾರ್ ರವರು ತಾವು ಸ್ವಾಧೀನಾನುಭವದಲ್ಲಿರತಕ್ಕ ಜಮೀನಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಯನ್ನು ಮಾಡಿದ್ದಾರ ಎಂದರೆ ಸರಿ. ಮಾರೇಗೌಡರು ಈ ಹಿಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿ. ಮಾರೇಗೌಡರ ಮರಣದ ನಂತರ ಮಾರೇಗೌಡರ ಮಕ್ಕಳು ಮಾರೇಗೌಡರು ಖರೀದಿ ಮಾಡಿರುವ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**